"SATYAVADI" || శ్రీ || Regd No M 1299

ಸತ್ಯವಾದಿ

ಆರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದದು

Founded 1917

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0

Proprietors—The Satyavadi Limited, Mysore

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 25 ಸಂಚಿಕೆ 4] ಬುಧವಾರ -25-9-1940 [ಬಿಡಿಪ್ರತಿ 6 ಕಾಸು

"ಮೋತೀಲಾಲ್ ಟಾಕೀಸ್"

(ಪ್ರಭುದೇವ್ ಥಿಯೇಟರ್)

(ಮೈಸೂರಿನ ಅತ್ಯಂತ ಸುಂದರ ಚಲಚ್ಚಿತ್ರ ಮಂದಿರ)

ಪ್ರಸಿದ್ಧ ಮಿನರ್ವಾ ಕಂಪೆನಿಯವರ ಸಾಮಾಜಿಕ ಚಲಚ್ಚಿತ್ರವಾದ

"ಭರೋಸ"

ಎಂಬ ಚಿತ್ರವನ್ನು ಪ್ರಾರಂಭಿಸುವ ತಾರೀಖನ್ನು ಗಮನಿಸಿ

ಈ ಪ್ರಸಿದ್ಧ ಚಿತ್ರಪಠವು ಸೊಹ್ರಾಬ್ ಮೋದಿಯವರ ಪುಕಾರಿಗಿಂತಲೂ ಉತ್ಕೃಷ್ಟವಾಗಿರುವುದು.

ಈಗಲೂ ಮೋದಿಯವರೇ ಈ ಪಠದ ದಿಗ್ದರ್ಶಕರು

ಇದರಲ್ಲಿ ಇಂಡಿಯಾದೇಶದಲ್ಲಿ ಪ್ರಸಿದ್ಧಿಪಡೆದಿರುವ

ಸರ್ದಾರ್ ಅಕ್ತಾರ್, ಚಂದ್ರಮೋಹನ್, ಶೀಲಾ, ಮಜಾರ್,

ಮೊದಲಾದವರು ಪಾತ್ರವಹಿಸುವರು.

A Great Theatre Event in Mysore

Motilal Talkies

(Prahbudeva Theatre)

Await the inaugaration of the Theatre Superb !

Presents

Gigantic Host of new Sensations never before Seen !

The best of Screen Epics in the Luxury of Modern Lighting Technique !

The Ultra Modern Theatre built for the Theatre Critic !

MOTILAL TALKIES

(The Theatre Superb)

PRESENTS

Gala — Glittering — Gorgeous — Entertainment

The Minerva Production of

' BHAROSA '

Directed by Sohrab Modi— Better than Pukar

STARRING.... Chandra Mohan, Sardar Akhtar Mazhar, Sheila and others.

A powerful story of two friends, one a believer and the other a worldly man, who fell a victim to the one vice, Passion.

The grave struggle of a disturbed mind. The heart-rending end which will shake everybody to the very foundation.

ಈ ವಾರದ ಕಥೆ—

ಇಪ್ಪತ್ತೆದು ನವರತ್ನಗಳು

(ಲೇಖಕರು—ಕೃಷ್ಣಸ್ವಾಮಯ್ಯಂಗಾರ್, ಮೈಸೂರು.)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಪಗಡೆ ಆಡುತ್ತಿದ್ದಾಗ ಅವಳು ಬಂದು ನನ್ನ ಪಕ್ಕದಲ್ಲಿ ಕುಳಿತಿದ್ದ ವಿಚಾರವನ್ನು ಕೇಳಿ ಅವನು ಅಚ್ಚರಿಗೊಂಡು ಭಯುವಿಪ್ತಲನಾಗಿ "ಅಯ್ಯಾ ಪರಮಪವಿತ್ರನೇ, ಇನ್ನು ಕೆಲವು ದಿನ ಆ ಊರನ್ತೇ ಬಿಟ್ಟರೆ ಒಳ್ಳೆಯದು, ನೀನು ಹೇಳುವ ವಿಚಾರವನ್ನೆಲ್ಲಾ ಕೇಳಿದರೆ ಹಿರಿಯರು ಹೇಳಿದಂತೆ ನಿನಗೆ ಮೋಹಿನಿ ಹಿಡಿದಿರುವಳು ಅದಕ್ಕೇನೆ ನಾನು ಬಂದ ತಕ್ಷಣ ನಿನಗೆ ಹೇಳಿದ್ದು ಒಳ್ಳೇ ಟಾನಿಕ್ ತೆಗೆದುಕೋ ಎಂದು" ಎಂದನು.

ಅಂತು ನಾವಿಬ್ಬರೂ ಆ ದಿನ ಮೋಟಾರಿನಲ್ಲಿ ಬೆಂಗಳೂರಿಗೆ ಹೋಗಬೇಕೆಂದು ತೀರ್ಮಾನಿಸಿ ಆ ತಕ್ಷಣವೇ ಹೊರಟು, ಪ್ರಯಾಣಕಾಲದಲ್ಲಿ ದಾರಿಯುದ್ದಕ್ಕೂ ಸಿಕ್ಕಿದ ಅನೇಕ ದೇವಸ್ಥಾನಗಳಿಗೆಲ್ಲಾ ಹೋಗಿ ದೇವರಿಗೆ ಹರಕೆ ಕಟ್ಟಿ ಆರತಿ ಮಾಡಿಸುತ್ತಾ ಸಾಯಂಕಾಲಕ್ಕೆ ಬೆಂಗಳೂರಿಗೆ ತಲುಪಿ ಒಂದು ಹೋಟೇಲ್‌ನಲ್ಲಿ ಎರಡು ರೂಮುಗಳನ್ನು ಬಾಡಿಗೆಗೆ ನಿಶ್ಚಯಿಸಿ ಅಲ್ಲಿ ಬಿಡಾರ ಮಾಡಿದೆವು. ಬಳಗಿನಿಂದ ಮೋಟಾರ್ ಪ್ರಯಾಣದಲ್ಲಿ ತುಂಬಾ ದಣಿವಿದ್ದರಿಂದ ಎಂಟು ಘಂಟೆಗೆ ಊಟ ಮಾಡಿ ನಮ್ಮ ನಮ್ಮ ರೂಮಿನಲ್ಲಿ ಮಲಗಿದೆವು.

ನನಗಂತೂ ಹಿಂದಿನ ರಾತ್ರಿ ವಿದ್ಯಮಾನಗಳನ್ನು ನೆನೆಸಿಕೊಂಡಂತೆ ಮೈ ಝುಂ ಎಂದಿತು. ನನ್ನ ಭಾಗದ ಮೃತ್ಯು ದೇವತೆಯು ಬರುವಂತೆ ಕಣ್ಣಿಗೆ ಕಟ್ಟಿದಂತಾಯಿತು. ಅಂತು ನಾವು ಹೇಳದೆ ಕೇಳದೆ ಬಂದಿರುವುದರಿಂದ ಆ ಮಾಯಾಂಗನೆಯು ಅಲ್ಲಿ ಬಂಬಲಾರಳೆಂದು ನಿರ್ಬಾಧಕವಾಗಿ ನಾನು ವಿಶ್ರಾಂತಿಪೊಂದಬಹುದೆಂದು ಯೋಚಿಸಿ ಹಾಸಿಗೆಯಲ್ಲಿ ಬಿದ್ದು ಒದ್ದಾಡುತ್ತಿದ್ದೆನು. ವಿದ್ಯುತ್ ದೀಪವು ಒಂಭತ್ತಕ್ಕೆ ಸರಿಯಾಗಿ ಫಕ್ಕೆಂದು ಆರಿತು. ಪುನಃ ಜ್ವಾಜಲ್ಯಮಾನವಾಗಿ ಹತ್ತಿತು ಎದುರಿಗೆ ಸುಸುಕೋವಲೆಯಾದ ಅತಿ ಸಾದೃಶ್ಯ ಆ ಮೋಹಿನಿಯು ಕಾಮ್ಯಸ್ವರೂಪದಲ್ಲಿ ಬಂದು ನಿಂತು "ಪ್ರಿಯಾ! ಇದೇನು ನನಗೂ ಅರವಾಗದಂತೆ ನೀವು ಈ ರೀತಿ ಬಂದು ಬಿಡುವುದೆ? ನೀವು ಇಲ್ಲಿಗೆ ಬಂದ ವಿಚಾರವನ್ನು ತಿಳಿದು ಈಗತಾನೇ ಮೈಲ್ ಗಾಡಿಯಲ್ಲಿ ಹೊರಟು ಬಂದೆನು. ಇದೇನು? ಇಷ್ಟು ಆತುರದಿಂದ ಬಂದಿರುವಿರಿ?" ಎಂದಳು.

ನನಗೆ ಭ್ರಾಂತಿಯಾಯಿತು. ಜತೆಗೆ ಭಯವೂ ಆಯಿತು. ಅವಳಿಗೇನುತ್ತರವನ್ನೀಯಲಿ? ಮುಂದೇನು ಗತಿ? ಎಂದು ಯೋಚಿಸುತ್ತಾ "ಪ್ರಿಯೆ ನಾಳೆ ಇಲ್ಲಿ ಕೋರ್ಟಿನಲ್ಲಿ ವ್ಯವಹಾರವಿರುವುದು, ಆದ್ದರಿಂದ ಬಂಬೇಕಾಯಿತ, ನಾಳೆ ಸಾಯಂಕಾಲವೇ ನಾನು ವಾಪಸ್ಸು ಬರುವವನಿದ್ದೆನು. ಇಲ್ಲಿಯ ವರೆಗೂ ಬರಲು ಯಾಕೆ ಸಾಹಸಪಟ್ಟೆ?' ಎಂದು ಧೈರ್ಯವಾಗಿ ಹೇಳಿದೆನು.

ಅವಳು "ಪ್ರಿಯಾ! ನೀವು ಹೇಳದೆ ಒಂದದ್ದು ನಿಮ್ಮ ತಪ್ಪು ಹೋಗಲಿ ಬಿಡಿ. ಹೇಗೂ ಬಂದದ್ದಾಯಿತಲ್ಲಾ" ಎನ್ನುತ್ತಾ ದಿನದಂತೆ ಮಲಗಿದಳು.

ಪಿಶಾಚಳು ಪಕ್ಕದಲ್ಲಿ ಮಲಗಿದ್ದಳೆಂದ ಮೇಲೆ ಅದೇ ನನ್ನ ವೈತ್ಯಶಯ್ಯೆಯೆಂದು ತಿಳಿದು ನನಗೆ ನಿದ್ರೆಯು ಬರುವುದೊತ್ತಟ್ಟಿಗೆ ಉಳಿದು ಎದೆಯು ಬಡಿದುಕೊಳ್ಳಲಾರಂಭಿಸಿತು. ಅಂತು ಸರ್ವಸನ್ನಾಹದಿಂದಾ ಅವಳಿಗೆ ಎಳ್ಳಷ್ಟು ಸಂಶಯ ಬಾರದಂತೆ ಆ ದಿನವೂ ಅವಳಲ್ಲಿ ಹರ್ಷವನ್ನು ಉತ್ಸಾಹವನ್ನು ನಡಿಸಿದೆನು. ಬೆಳಗ್ಗೆ ಐದು ಘಂಟೆಗೆ ಅವಳು ಹೊರಟುಹೋದಳು.

ಸೂರ್ಯೋದಯಕ್ಕೆ ಸ್ವಲ್ಪ ಮೊದಲು ನನ್ನ ಸ್ನೇಹಿತನು ಬಂದು "ಏನೈಯ್ಯಾ ಸುಖವಾಗಿದ್ದೀಯಾ? ರಾತ್ರಿ ಜನ್ನಾಗಿ ನಿದ್ದೆ ಬಂತೆ?" ಎಂದನು.

ನಾನು ನಡೆದ ಸಂಗತಿಯನ್ನೆಲ್ಲಾ ಹೇಳಿದೆನು. ಅವನಿಗೂ ಭಯವಾಯಿತು "ಸ್ವೇಚ್ಛಾಚಾರಳೂ ಕಾಮಚಾರಳೂ ಆದ ಪಿಶಾಚವರ್ಗಕ್ಕೆ ಯಾವುದು ತಾನೇ ಸಾಧ್ಯವಿಲ್ಲಾ! ಈಗೇನು ಮಾಡೋಣ?" ಎಂದನು

ಆ ವೇಳೆಗೆ ಕಾಫಿ ತಿಂಡಿ ಬಂತು. ಅದನ್ನು ಮುಗಿಸಿ ಅಲ್ಲಿನ ಪ್ರಸಿದ್ಧ ಮಂತ್ರಗಾರ ಯಕ್ಷಣೀದೇವತೆಯ ಜಾಪಾಶಕ ಪಿಶಾಚ ಸಿದ್ದಯ್ಯನೆಂಬುವನ ಮನೆಯನ್ನು ಪತ್ತೆಮಾಡಿ ಅಲ್ಲಿಗೆ ಬಂದು ಕುಳಿತೆವು.

ಪಿಶಾಚ ಸಿದ್ದಯ್ಯನು ನಿಜವಾಗಿ ಅನ್ವರ್ಥನಾಮಧಾರಿಯಾಗಿದ್ದನು. ನಾವು ಅಲ್ಲಿಗೆ ಹೋಗುವ ವೇಳೆಗೆ ನಮ್ಮಂತೆ ಗ್ರಹಶಂಕೆಯಾದವರು, ಪಿಶಾಚ ಹಿಡಿದವರು ಉನ್ಮಾದಾವಸ್ಥೆಯಾದವರು, ಮಾಟದಿಂದ ನರಳುವ ಅಂಗಹೀನರು ಆದಿಯಾಗಿ ನೂರಾರು ಜನ ಗಂಡಸರೂ, ಹೆಂಗಸರೂ, ಮಕ್ಕಳೂ ನೆರೆದು ತುಂಬಿದ್ದರು. ಆ ಗುಂಪಿಗೆ ನಾವು ಸೇರಿದೆವು.

ವಿವಿಧ ಬಣ್ಣಗಳ ರಂಗವಲ್ಲಿಯಿಂದಾ ಚಿತ್ರವಿಚಿತ್ರವಾಗಿ ಬರೆದ ಚಿತ್ರಗಳ ಮಧ್ಯದಲ್ಲಿ ಒಬ್ಬ ಯುವತಿಯು ತೂರಿಯಾಡುತ್ತಾ "ಹಾ! ಹಾ! ಹು! ಹು!" ಎನ್ನುತ್ತಾ ಘೋರಾಕಾರವಾಗಿ ಕೂಗುತ್ತಾ ಅತಿ ಭಯಂಕರಳಾಗಿ ಕಾಣುತ್ತಿದ್ದಳು.

ಪಿಶಾಚ ಸಿದ್ದಯ್ಯನು ಚಿನ್ನದ ಹಿಡಿಗಳಿಂದ ಅಲಂಕೃತವಾಗಿದ್ದ ಸುಮಾರು ಮೂರು ಅಡಿ ಕರೀಬೆತ್ತವನ್ನು ಅಲ್ಲಿ ಬರೆದಿಟ್ಟಿದ್ದ ಯಂತ್ರದ ಮೇಲೆ ಹೊಡೆಯುತ್ತಾ "ಹ್ಯಾಂ! ಹ್ಯೀಂ! ಹ್ಯುಂ! ಮಾರಣ, ಮಾರಣ, ಮಾರಣ, ಉಚ್ಚಾಟನ, ಉಚ್ಚಾಟನ, ಉಚ್ಚಾಟನ, ಓಂ ಕಾಳಿ ಕಪಾಲಿ ಭೈರವಿ ಯಕ್ಷಣಿ ಹಾ, ಹೀ, ಪಟು, ಸ್ವಾಹಾಪಲ, ಸ್ವಾಹಾಂ" ಎನ್ನುತ್ತಾ ಈ ಮಧ್ಯೆ ತನ್ನ ದಪ್ಪವಾದ ಗಾಸೆಯನ್ನು ಮತ್ತೊಂದು ಕೈಯಲ್ಲಿ ಹುರಿಮಾಡುತ್ತಾ "ನೀನು ಯಾರು ಹೇಳು—ಎಂದು ಘರ್ಜಿಸಿದನು.

ಯುವತಿಯು "ಹಹಹ! ಹಿ!" ಎಂದು ನಗುತ್ತಲೇ ಇದ್ದಳು. ಇವನು ಬೆತ್ತದಿಂದ ಯಂತ್ರವನ್ನು ಜೋರಾಗಿ ಹೊಡಿಯುತ್ತಾ ಮೂರಾವರ್ತಿ ಅವಳಿಗೆ ಆ ಕೋಲಿನಿಂದ ನಿರೂಪಿಸಿದನು. ಆಗ ಅವಳು, "ಅಯ್ಯೋ, ಅಪ್ಪಾ ಉರಿ ತಡೆಯಲಾರೆ" ಎಂದು ಎದ್ದು ಹಾರಾಡುವುದಕ್ಕೆ ಮೊದಲು ಮಾಡಿದಳು.

"ಹಾಗಾದರೆ ನೀನು ಯಾರು?" ಎಂದು ಪಿಶಾಚಿ ಸಿದ್ದಯ್ಯನು ಪುನಃ ಘರ್ಜಿಸಿದನು.

"ನಾನು ಭೂತನಗುಡ್ಡದ ದೇವತೆ, ನನ್ನನ್ನು ಬಿಟ್ಟುಬಿಡಿ ಇನ್ನು ಯಾರಿಗೂ ತೊಂದರೆ ಕೊಡುವುದಿಲ್ಲ" ಎಂದಿತು.

ಪಿಶಾಚ ಸಿದ್ದಯ್ಯನು ಬಂದು ಜಟಕಿ ಕುಂಕುಮವನ್ನು ತೆಗೆದು ಅವಳಿಗೆ ಹಚ್ಚಿ—"ನೀನು ಹೊರಟು ಹೋಗು ಇಲ್ಲದಿದ್ದರೆ ನಿನ್ನನ್ನು ಮಾರಣ ಮಾಡಿಬಿಡುವೆನು—ಖಬರ್‌ದಾರ್" ಎಂದು ಘರ್ಜಿಸಿದನು.

ಆ ತಕ್ಷಣ ಅವಳು ಮೂರ್ಛೆಹೋದಳು. ಜಾಪಾಸಕನು ಅವಳಿಗೆ ಶೈತ್ಯೋಪಚಾರ ಮಾಡಿ ಚಿನ್ನದ ತಾಯತಿಯಲ್ಲಿ ಯಂತ್ರವನ್ನು ಸಮಸ್ತ ಪೂಜೆಯಿಂದ ಸೇರಿಸಿ—ಅವಳ ಬಲಗೈ ತೋಳಿನ ಮೇಲೆ ಹಾಕಿ ಅವರ ಕಡೆಯವರನ್ನು ಕರೆದು—ಇನ್ನು ಆ ಭೂತನಗುಡ್ಡದ ದೇವತೆಯು ನಿಮ್ಮ ಹುಡುಗಿಯನ್ನು ಹಿಂಸಿಸುವುದಿಲ್ಲ, ನಿನ್ನೆದುರಿಗೇ ಹೇಳಿಬಿಟ್ಟು ಹೋಗಿರುವುದು. ಇನ್ನು ನೀವು ನಿರಾಲೋಚನೆಯಿಂದ ಇರಬಹುದು" ಎಂದನು.

ನಂತರ ಮತ್ತೊಬ್ಬ ಉನ್ಮಾದನು ಆ ರಂಗೋಲೆ ಚಿತ್ರದ ಮೇಲೆ ಕುಳಿತನು. ಪುನಃ ಜಪಾಸಕನು ತನ್ನ ವಂತ್ರೋಚ್ಚಾರಣೆಯನ್ನು ಶುರು ಮಾಡಿದನು.

ಅಂತು ಇದನ್ನೆಲ್ಲಾ ನೋಡುತ್ತಾ ನಮ್ಮಿಬ್ಬರಿಗೂ ಧೈರ್ಯವಾಯಿತು. ಇವನು ಖಂಡಿತ ನನಗೆ ಹಿಡಿದಿರುವ ಮೋಹಿನಿಯನ್ನು ಬಿಡಿಸುತ್ತಾನೆಂದೂಹಿಸಿದೆನು. ಎಲ್ಲರೂ ಹೊರಟು ಹೋಗುವ ವೇಳೆಗೆ ಮಧ್ಯಾಹ್ನ ಹನ್ನೆರಡು ಘಂಟೆ ಹೊಡೆಯಿತು.

ಜಪಾಸಕನು ನಮ್ಮ ಬಳಿಗೆ ಬಂದು "ಸ್ವಾಮಿ ತಾವು ಬಹಳ ಹೊತ್ತಿನಿಂದ ಕಾದಿರುವಿರಿ? ನನ್ನಿಂದಾ ಏನಾದರೂ ಆಗಬೇಕಾದರೆ, ಯಕ್ಷಿಣಿದೇವಿಯ ಕೃಪೆಯಿಂದ....." ಎಂದನು.

ನನ್ನ ಮಿತ್ರನು ನನ್ನ ಅವಸ್ಥೆಯನ್ನೆಲ್ಲಾ ಒಂದನ್ನೂ ಬಿಡದೆ ಹೇಳಿದನು.

"ನೀವು ಹೇಳುವುದೆಲ್ಲಾ ನಿಜವಾಗಿದ್ದರೆ ನೀವು ರಾಜಮೋಹಿನಿ ಗ್ರಸ್ತರಾಗಿರುವಂತೆ ಕಾಣುತ್ತೆ. ಆದರೆ ಇದು ಸಾಮಾನ್ಯ ಯಂತ್ರದಿಂದ ಬಿಟ್ಟುಹೋಗುತಕ್ಕದಲ್ಲಾ" ಎಂದನು. ನಮಗೆ ದಿಕ್ಕು ತೋರದಂತಾಯಿತು.

(ಸಶೇಷ)

ಸತ್ಯವಾದಿ

ಬ್ರಿಟಿಷ್ ಮುಖ್ಯ ಪ್ರಧಾನರ ಭಾಷಣ

—

ಬ್ರಿಟಿಷ್ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರು ಬ್ರಿಟಿಷ್ ಜನತೆಯನ್ನುದ್ದೇಶಿಸಿ ಭಾಷಣ ಮಾಡಿ ಧೈರ್ಯದ ಸಂದೇಶ ಕೊಟ್ಟರು. ಆ ಕಾಲಕ್ಕೆ ಅವರು ಹೇಳಿದ ಮುಖ್ಯ ಮಾತುಗಳೇನೆಂದರೆ—ನಮ್ಮ (ಬ್ರಿಟಿಷ್) ವೈಮಾನಿಕರು ವೈರಿಗಳನ್ನು ಎದುರಿಸಿ ಅವರನ್ನು ನೆಲಕ್ಕೆ ಉರುಳಿಸಿರುತ್ತಾರೆ. ಈಗ ನಡೆದ ವಿಮಾನ ಕಾಳಗದಲ್ಲಿ ಒಂದು ವಿಮಾನ ಬಿದ್ದರೆ ವೈರಿಗಳ ಮೂರು ವಿಮಾನಗಳು ಬೀಳುತ್ತಲಿವೆ. ಸದ್ಯದ ಯುದ್ಧದಲ್ಲಿ ವೈರಿಗಳು ಭಯಂಕರ ರೀತಿಯ ಹಾನಿಯನ್ನು ಸೋಲಿಸುತ್ತಲಿರುತ್ತಾರೆ. ನಮ್ಮ ವೈಮಾನಿಕ ಶಕ್ತಿಯು ಈಗ ಮೊದಲನಕ್ಕಿಂತ ಹೆಚ್ಚಾಗಿದ್ದು ಇನ್ನೂ ಕೆಲವು ದಿವಸ ಹೀಗೆ ಯುದ್ಧ ನಡೆದರ ವೈರಿಗಳ ಎಲ್ಲ ವಿಮಾನಗಳು ನಾಶವಾಗುತ್ತವೆ.

ವೈಮಾನಿಕ ಯುದ್ಧದಲ್ಲಿ ಸಂಪೂರ್ಣ ಅಧಿಕಾರ ದೊರೆಯದೆ ನಮ್ಮ ಮೇಲೆ ದಾಳಿ ಮಾಡುವುದು ಕಠಿಣವಿದೆ. ಆದರೂ ಹಿಟ್ಲರನು ದಾಳಿಯ ಸಿದ್ಧತೆಯನ್ನು ಪ್ರಚಂಡ ರೀತಿಯಿಂದ ನಡೆಯಿಸಿರುತ್ತಾನೆ. ಜರ್ಮನ್, ಡಚ್, ಬೆಲ್ಜಂ, ಫ್ರೆಂಚ್ ಬಂದರುಗಳಲ್ಲಿ ವೈರಿಗಳ ಹಡಗುಗಳು ಸಂಗ್ರಹವಾಗಹತ್ತಿರುತ್ತವೆ. ನಾರ್ವೆದ ಬಂದರುಗಳಿಂದ ಸೈನ್ಯವನ್ನು ತರಲು ಹಡಗುಗಳು ಸಿದ್ಧವಾಗಹತ್ತಿರುತ್ತವೆ. ಈ ಸೈನ್ಯಗಳಿಂದ ಬ್ರಿಟನ್ನಿನ ಮೇಲೆ ದಾಳಿಯಾಗುವದಂತೆ, ಈ ಹಡಗುಗಳು ಈಗ ದಾಳಿ ಮಾಡುವದಕ್ಕೆ ಮೇಲಧಿಕಾರಿಗಳ ಆಜ್ಞೆಗಾಯುತ್ತಿರುತ್ತವೆ. ಆದರೆ ಇವರ ಸಮುದ್ರ ಪ್ರಯಾಣವು ಬಹಳ ಕಠಿಣತರದಿದ್ದೆ ಆದರೂ ನಾವು ಈ ಪ್ರಚಂಡ ದಾಳಿಯ ಸಿದ್ಧತೆಯನ್ನು ಅಲಕ್ಷ್ಯ ಮಾಡಲಿಕ್ಕೆ ಒರುವುದಿಲ್ಲ.

ನಮ್ಮ ಪ್ರಚಂಡವಾದ ನೌಕಾಪಡೆಯು ಒಳ್ಳೇ ಶಕ್ತಿಸಂಪನ್ನವಾಗಿದೆ, ವೈಮಾನಿಕ ಶಕ್ತಿಯು ಬಲಿಷ್ಟವಾಗಿದೆ ಸೈನ್ಯ ಯಂತ್ರಸಾಮಗ್ರಿಗಳು ಹೇರಳವಾಗಿರುತ್ತವೆ. ನಮ್ಮ ಸುತ್ತುಮುತ್ತು ಸಂರಕ್ಷಣೆಯು ಒಳ್ಳೇ ಭದ್ರವಾಗಿರುತ್ತದೆ.

ದುಷ್ಟ ಹಿಟ್ಲರನು ಸೇಡನ್ನು ತೀರಿಸಿಕೊಳ್ಳುವಲ್ಲಿ ಆತುರನಾಗಿ ತನ್ನ ಕೊಲೆ ಪಾತಕದಿಂದ ನಮ್ಮ ಪ್ರಸಿದ್ಧ ದ್ವೀಪಗಳನ್ನು ಹಾಳುಮಾಡಲು ಪ್ರವೃತ್ತನಾಗಿರುತ್ತಾನೆ. ಪ್ರಸಂಗ ಬಂದಾಗ್ಗೆ ಬ್ರಿಟನ್ನ ಪ್ರತಿಯೊಬ್ಬ ಸ್ತ್ರೀಪುರುಷರು ಎಂಥ ಪ್ರಸಂಗ ಬಂದರೂ ಅಭಿಮಾನ ಮತ್ತು ದಕ್ಷತೆಯಿಂದ ಕಾರ್ಯಮಾಡಲು ಸಿದ್ಧರಿರಬೇಕು.

ಬಿಸಿಬಿಸಿ ಸುದ್ದಿ

ದಕ್ಷಿಣ ಆಫ್ರಿಕಾದಲ್ಲಿ ಯುದ್ಧ ಹರಡಿತು. ಡಕಾರ್ ಎಂಬುವದು ದಕ್ಷಿಣ ಆಫ್ರಿಕಾದ ಫ್ರೆಂಚ್ ಸ್ವಾಸ್ಥ್ಯಗಳಿಗೆ ಮುಖ್ಯಸ್ಥಳ. ಹಿಂದೆ ಫ್ರೆಂಚ್ ಜನರಲ್ಲಾಗಿದ್ದ ಡಿಗಾಲ್ ರವರು ಬ್ರಿಟಿಷ್ ಸೈನ್ಯದೊಡನೆ ಅಲ್ಲಿಗೆ ಹೋಗಿ ತಮಗೆ ಶರಣಾಗತನಾಗಬೇಕೆಂದು ತಿಳಿಸಿದರು, ಅಲ್ಲಿಯ ಸರಕಾರವು ತಿರಸ್ಕರಿಸಿತು. ಬ್ರಿಟಿಷ್ ಸೈನಿಕರು ಗುಂಡು ಹಾರಿಸಿದರು. ಇನ್ನು ಅಲ್ಲೂ ಯುದ್ಧವು ಜೋರಾಗಬಹುದು.

ಂ ಂ

ಈಜಗೆ ಲಂಡನ್ನಿನಲ್ಲಿದ್ದ ಇಂಡಿಯನ್ ಸ್ಟೂಡೆಂಟ್ಸ್ ಹಾಸ್ಟಲಿಗೆ ಬಾಂಬು ಬಿದ್ದವು.

ಂ ಂ

ಮೊನ್ನೆ ದಿವಸ ಬರ್ಲಿನ್ ಮೇಲೆ ಬ್ರಿಟಿಷ್ ವಿಮಾನಗಳು ಭಾರಿ ದಾಳಿ ನಡೆಸಿದವು.

ಂ ಂ

ಫ್ರೆಂಚ್ ಸರ್ಕಾರದಿಂದ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ದೊರೆಯುತ್ತಿದ್ದ ಗ್ರಾಂಟು ನಿಲ್ಲಿಸಲಾಗಿದೆ.

ಂ ಂ

ಸಂಯುಕ್ತ ಸಂಸ್ಥಾನದಲ್ಲಿ ಸಮುದ್ರದಲ್ಲಿ ದೊರೆಯುವ 160 ಬಗೆಯ ಆಹಾರಗಳನ್ನು ತಿನ್ನುವರು

ಂ ಂ

ಡಾಕಾ ವಿಶ್ವವಿದ್ಯಾಲಯದಲ್ಲಿನ ಹಾಸ್ಟಲ್ಲಿನಲ್ಲಿ ನೀರಿನ ಅಭಾವವುಂಟಾಗಲು ಹಾಸ್ಟಲಿನ 100 ಮಂದಿ ಮಹಮದೀಯ ವಿದ್ಯಾರ್ಥಿಗಳು ರಾತ್ರೆ ಒಂದು ಗಂಟೆ ಹೊತ್ತಿನಲ್ಲಿ ವೈಸ್‌ಚಾನ್ಸೆಲರ್ ಮನೆಗೆ ಹೋಗಿ "ಅಲ್ಲಾಹೋ-ಅಕ್ಬರ್", ಎಂದು ಕೂಗಿಕೊಂಡು ಗಲಾಟೆ ಮಾಡಿದರು.

ಂ ಂ

ಅಖಿಲಭಾರತ ಗಾಂಧಿ ಸೇವಾಸಂಘದ ನೇತೃತ್ವದಲ್ಲಿ ಸಂಪೂರ್ಣ ಅಹಿಂಸೆಯ ಧ್ಯೇಯವನ್ನಿಟ್ಟುಕೊಂಡಂಥ ಶಾಂತಿಸೇನೆ ಎಂಬ ಹೆಸರಿನ ಒಂದು ದಂಡು ಸ್ಥಾಪಿತವಾಗತಕ್ಕದ್ದಿರುತ್ತದೆ.

ಮಾವ ಅಳಿಯನ ಜಗಳ

" ಮಾವನು ತನ್ನ 9 ವರ್ಷದ ಮಗಳನ್ನು ಅಳಿಯನ ಮನೆಗೆ ಕಳುಹಿಸಿಕೊಡಲೊಪ್ಪದಿರಲು ಆ ಅಳಿಯ ಮಾವನಿಂದ ಕಡ ತೆಗೆದುಕೊಂಡ ಗುದ್ದಲಿಯನ್ನು ಹಿಂತಿರುಗಿಸಲಿಲ್ಲ " ಎಂಬವೇ ಕಾರಣಗಳಿಗಾಗಿ ಕೊರವಜಾತಿಯ ಮಾವ ಅಳಿಯರು ದಿರೊಳಗೆ, ಮನ್ನಾರಗುಡಿಯ ಪ್ರಾಂತದಲ್ಲಿ ಮಾರಾಮಾರಿಯಾಗಿ ಮಾವನಿಗೆ ತುಂಬಾ ಜಖಂ ಆಗಿದೆ. ಈ ಜಗಳವನ್ನು ಬಿಡಿಸಲುಬಂದ ಮಾವನ ತಾಯಿ ಪೆಟ್ಟುತಿಂದು ಮೃತಳಾದಳು. ! ಆ ಅಳಿಯ ಮಹಾರಾಯನನ್ನು 'ಅವನ ಅಪ್ಪನನ್ನು ಪೋಲಿಸರು ಕೈದು ಮಾಡಿದ್ದಾರೆ ಎಂದು ತಿಳಿದು ಬರುತ್ತಿದೆ.

ವಿವಿಧ ವಿಷಯಗಳು

ಕಲ್ಕತ್ತಾದ ಹಾಲ್ವೆಲ್ ಸ್ಮಾರಕವು ಮೊದಲಿದ್ದ ಸ್ಥಳದಿಂದ ಜನಸಾಮಾನ್ಯದ ಕಣ್ಣಿಗೆ ಬೀಳದಂತೆ ಬೇರೆಕಡೆಗೆ ಸಾಗಿಸಲಾಗುತ್ತಿದೆ.

ಈಜಿಪ್ಟ್ ಸರಕಾರವು ಅಲ್ಲಿಯ ಇಟಾಲಿಯನ್ನರನ್ನು ಬಂಧಿಸುತ್ತಿದೆ.

ಹೈದರಾಬಾದಿನಲ್ಲಿ ಖಾದಿ ಬಟ್ಟೆಯನ್ನು ತಯಾರಿಸಲು ಅಲ್ಲಿಯ ಸರ್ಕಾರವು ಸಹಾಯ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ.

ಹಿಟ್ಲರಿನ ಬಲಗೈ ಆಗಿರುವ ಗೋರಿಂಗು ಮುಂದೆ ಫ್ರಾನ್ಸಿನ ಸರ್ವಾಧಿಕಾರಿಯಾಗುವನೆಂದು ಹೇಳಲಾಗಿದೆ. ಬಾಕಿ ಕನಸೆಲ್ಲಾ ನಿಜವಾದ ಮೇಲೆ ತಾನೇ ಇದು !

ಶ್ರೀ ಸತ್ಯಮೂರ್ತಿಗಳು ಸಿಲೋಲ್ ಕಾರಗ್ರೆಸ್ಸಿನಲ್ಲಿ ಭಾಷಣ ಮಾಡುವಾಗ ಭರತಖಂಡವು ಇನ್ನೊಂದು ವರ್ಷದಲ್ಲಿ ಸ್ವರಾಜ್ಯಪಡೆಯುವುದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಅಕಸ್ಮಾತ್ ಅವಶ್ಯಬಿದ್ದಾಗ ಸೆನೇಟ್ ಕಟ್ಟಡವನ್ನು ಆಸ್ಪತ್ರೆಯಾಗಿ ಉಪಯೋಗಿಸಿಕೊಳ್ಳಲು ಸರ್ಕಾರಕ್ಕೆ ಕೊಡಲು ಕಲ್ಕತ್ತಾ ವಿಶ್ವವಿದ್ಯಾಲಯದವರು ತೀರ್ಮಾನಿಸಿರುತ್ತಾರೆ.

ಕ್ಯಾಲಿಫೋರ್ನಿ ವಿಶ್ವವಿದ್ಯಾಲಯದ ಪ್ರೊಫೆಸರಿಬ್ಬರು ಒಂದು ಹೊಸ ಔಷಧಿಯನ್ನು ಕಂಡುಹಿಡಿದಿರುವರೆಂದು ಅದನ್ನು ದೇಹಕ್ಕೆ ಸೇರಿಸುವದರಿಂದ ಅತಿ ಕ್ರೂರಪ್ರಾಣಿಯು ಸಾಧುಪ್ರಾಣಿಯಾಗುವದೆಂದು ತಿಳಿಯಬಂದಿದೆ ಹುಲಿ ಸಿಂಹಗಳನ್ನು ಈ ರೀತಿ ಸಾಧು ಮಾಡಲು ಪ್ರಯತ್ನಿಸುತ್ತಿದ್ದಾರೆ.

ಜಾನ್ಸಿಯಿಂದ ಬಂದಿರುವ ವಾರ್ತೆ.— ಒಬ್ಬ ಬಡಪಟ್ಟ ಹೆಂಗಸು ಊರಿನ ಹತ್ತಿರವಿದ್ದ ಕಾಡಿಗೆ ಹೋಗಿ ಸೌದೆ ಶೇಖರಿಸುತ್ತಿದ್ದಳು. ತನ್ನ 2 ವರ್ಷದ ಮಗುವನ್ನು ಒಂದು ಮರದ ಕೆಳಗೆ ಮಲಗಿಸಿದ್ದಳು. ಒಂದು ಹಾವು ಮಗುವಿನ ಹತ್ತಿರ ಬಂದಿತು. ಎರಡೂ ಆಟವಾಡತೊಡಗಿದವು. ಮುದ್ದುಮುದ್ದಾಗಿ ಹೊಡೆದಾಡುತ್ತಿದ್ದವು. ದೂರದಲ್ಲಿ ಹೋಗುತ್ತಿದ್ದ ಪ್ರಯಾಣೀಕನೊಬ್ಬನು ಕಂಡು ಕೂಗಿಕೊಂಡನು. ತಾಯಿ ಬಂದು ನೋಡಿ ಹೆದರಿ ಪೂರ್ಜೆ ಹೋದಳು. ತಂಬಾ ಜನರು ಸೇರಿದರು. ಆದರೂ ಹಾವು ಹೋಗಲಿಲ್ಲ. ಕಡೆಗೆ ಒಬ್ಬ ಹಾವಾಡಿಗನು ಬಹು ಉಪಾಯವಾಗಿ ಹಾವನ್ನು ಹಿಡಿದನು.

ಪೆರೂದೇಶಕ್ಕೆ ಸೇರಿದ ಆಂಡೆಸ್ ಪರ್ವತದಲ್ಲಿನ ಮಾಡ್ರೆ ಡೈಲಿಸ್ ಎಂಬ ಕಾಡು ಪ್ರದೇಶದಲ್ಲಿ ವಾಸವಾಗಿರುವ ಬಿಳೀ ಜನಾಂಗದ 80 ಸಂಸಾರಗಳಿಗೆ ಹಿಟ್ಲರ್ ಹೆಸರಾಗಲಿ ವ್ಯಸೋಲಿನಿಯ ಹೆಸರಾಗಲಿ ಗೊತ್ತಿಲ್ಲವಂತೆ. ಅವರೇ ಪುಣ್ಯವಂತರು !

ಕೊಲವಾಡಾದಲ್ಲಿ ಕುದುರೆಗಳು ಬಹು ಕುಳ್ಳು, ಮೂವತ್ತು ಅಂಗುಲ ಮಾತ್ರ ಎತ್ತರವಂತೆ.

ಈ ವಾರದ ಭವಿಷ್ಯ

ಜ್ಯೋತಿಷ್ಯರ್ — ಕೃಷ್ಣಾಪುರದ
ಶೇಟ್ಲೂರು ವೆಂಕಟನರಸಿಂಹಾಚಾರ್
ಬೃಹಸ್ಪತಿ ಜ್ಯೋತಿಷಾಲಯ,
ಹಳೇ ಪೋಸ್ಟಾಫೀಸು ರೋಡು, ಮೈಸೂರು

ಮೇಷ

ತಾ|| 25, 26, 1 ಮಿತ್ರಾಭಿವೃದ್ಧಿ ಇಷ್ಟಕಾರ್ಯಸಿದ್ಧಿ ಆಭರಣಾದಿ ಸುಖ ಗೃಹ ಕೈತ್ಯಾನುಕೂಲತೆ ರಾಜಕೀಜನರಿಂದ ಸೌಖ್ಯ ಶುಭೋದಯ ಉಳಿಕೆ ದಿವಸಗಳಲ್ಲಿ ಸ್ವಲ್ಪ ಅನಾರೋಗ್ಯ ಬಂಧುಜನಗಳಿಗೆ ಸ್ವಲ್ಪ ತೊಂದರೆ ಶತ್ರುಬಾಧೆ ಜನರಲ್ಲಿ ಮನಸ್ತಾಪ ಚಂಚಲತೆ ವಿಷ್ಣುಸಹಸ್ರನಾಮ ಪಾರಾಯಣ ಮಾಡಿ ಶುಭ.

ವೃಷಭ

ತಾ|| 25, 26, 30, 1 ಚಂಚಲತೆ ಮತಾಚಾರ ಕಡಮೆ ಸಂಚಾರಾಧಿಕ ಅನಾರೋಗ್ಯ ಕಾರ್ಯಭಂಗ ಸರ್ಕಾರಿ ಕಾರ್ಯ ಮುಂದುನರಿಸುವಿಕೆ ರುದ್ರಾಭಿಷೇಕಕ್ಕೆ ಸಹಾಯಮಾಡಿ ಹಸೀಕಡಲೆ ದಾನಕೊಡಿ ಕ್ಷೇಮ. ಉಳಿಕೆ ದಿವಸಗಳಲ್ಲಿ ಆರೋಗ್ಯ ಕಾರ್ಯದಲ್ಲಿ ಉತ್ಸಾಹ ಬಂಧುವೃದ್ಧಿ ಇಷ್ಟಕಾರ್ಯಸಿದ್ಧಿ ರಾಜಸೇವಜನರ ಸ್ನೇಹ ಸ್ವಪರಜನ ಸಹಾಯ ಗೃಹಾಭಿವೃದ್ಧಿ.

ಮಿಥುನ

ಈ ವಾರ ನಿಮಗೆ ಸರ್ಕಾರಿ ಜನರಿಂದ ಮನ್ನಣೆ ಸಮಾನಜನವೃದ್ಧಿ ಪುಣ್ಯತೀರ್ಥ ಸ್ನಾನಫಲ ದೇವತಾಗುರುಭಕ್ತಿ ದೊಡ್ಡವರಲ್ಲಿ ಸ್ನೇಹ ಗೃಹಾಭಿವೃದ್ಧಿ ಶುಭವಾರ್ತಾಧಿಕ ಪೂಜ್ಯರಲ್ಲಿ ಸತ್ಕಾರ ಪ್ರಯಾಣದಿಂದ ಕಾರ್ಯಾನುಕೂಲತೆ ಯಶೋಲಾಭ ಉಂಟಾಗುತ್ತೆ.

ಕರ್ಕಾಟಕ

ಈ ವಾರ ನಿಮಗೆ ಆಹ್ವಾನಪತ್ರಿಕಾ ಭಾಗ್ಯ ರಾಜಕೀಜನರಿಂದ ಸೌಖ್ಯ ಮಿತ್ರವರ್ಗಾಭಿವೃದ್ಧಿ ಗೃಹಕೃತ್ಯಾನುಕೂಲತೆ ಪರೋಪಕಾರ ವಾಹನಾದಿಸುಖ ಸಂಚಾರಾಧಿಕ ಮಹಾತ್ಮರ ಸೇವಾಫಲ ತಾ|| 29, 30 ಮಿತ್ರರ ವಿರೋಧ ಗೃಹಕೃತ್ಯದಲ್ಲಿ ಅನಾರೋಗ್ಯ ಧನಧಾನ್ಯ ವ್ಯಯ ಹುಡುಗರಿಗೆ ಹಾಲು ತೆಗೆದುಕೊಡಿ ಕ್ಷೇಮ.

ಸಿಂಹ

ತಾ|| 25, 29, 30, 1 ಜಯಪ್ರದ ಗೃಹಾಭಿವೃದ್ಧಿ ಬಂಧುಭಾಗ್ಯ ಶತ್ರುಂಜಯ ದೊಡ್ಡವರಲ್ಲಿ ವಿಶ್ವಾಸಾಧಿಕ ಸರ್ಕಾರಿಕಾರ್ಯಾನುಕೂಲತೆ ಸ್ವಪರಜನಸಹಾಯಸದ್ವಿದ್ಯಾ ಲಾಭ ಮಹಾತ್ಮರ ಸೇವಾಫಲ ಶುಭೋದಯ ಉಳಿಕೆ ದಿವಸಗಳಲ್ಲಿ ಪುಣ್ಯಕಾರ್ಯಭಂಗ ಮಿತ್ರರಲ್ಲಿ ದ್ವೇಷ ಕೆಲವು ರಾಜಕೀಜನರಲ್ಲಿ ವಿರೋಧತೆ ಮನೋವ್ಯಾಕುಲತೆ ವಿದ್ಯಾಭಂಗ ಅನಾರೋಗ್ಯ ತೊಗರೀಬೇಳೆ ವಸ್ತ್ರ ಇವುಗಳು ಬ್ರಹ್ಮಚಾರಿಗೆ ಕೊಡಿ ಶುಭಫಲ.

ಕನ್ಯಾ

ತಾ|| 25, 26, 27 ಸತ್ಯಥಾಶ್ರವಣ ದೇವತಾಗುರುಭಕ್ತಿ ರಾಜಕೀಜನಗಳ ಮನ್ನನೆ ಶತ್ರುಂಜಯ ಆರೋಗ್ಯಭಾಗ್ಯ ಗೃಹಾಭಿವೃದ್ಧಿ ಮಂಗಳಕಾರ್ಯ ಬಂಧುಭಾಗ್ಯ ಉಳಿಕೆ ದಿವಸಗಳಲ್ಲಿ ಅಪ್ತರೊಡನೆ ಮನಸ್ತಾಪ ಧನವ್ಯಯ ಚಂಚಲತೆ ಸರ್ಕಾರಿ ಕಾರ್ಯ ಮುಂದುವರಿಸುವಿಕೆ ಅನಾರೋಗ್ಯ ಗೋಧವೆ ಹಾಲು ದಾನ ಕೊಡಿ ಕ್ಷೇಮ.

ತುಲಾ

ಈ ವಾರ ನಿಮಗೆ ಬಂಧುಪ್ರೀತಿ ಇಷ್ಟಕಾರ್ಯಾನುಕೂಲತೆ ಗುರುಭಕ್ತಿ ಮನೋಲ್ಲಾಸ ದೇವತಾ ಸೇವಾಫಲ ರಾಜಕೀಜನ ಮಿತ್ರರಿಂದ ಕಾರ್ಯಲಾಭ ಸಂಘಕಾರ್ಯದಲ್ಲಿ ಉತ್ಸಾಹ ವಿದ್ಯಾಭಿವೃದ್ಧಿ ಸನ್ಮಾನಭಾಗ್ಯ ಗೃಹಾಭಿವೃದ್ಧಿ ತಾ. 25, 1 ಬಂಧು ವಿರೋಧ ಸಂಚಾರಾಧಿಕ ಕಲಹದಲ್ಲಿ ಅಪಜಯ ಅನಾರೋಗ್ಯ ವ್ಯಯಾಧಿಕ ಹುತ್ತಕ್ಕೆ ಹಾಲುಬಿಡಿ ಶುಭಫಲ.

ವೃಶ್ಚಿಕ

ನಿಮಗೆ ಬಂಧುಮಿತ್ರಭಾಗ್ಯ ವಿದ್ಯಾವಿನೋದ ಸುಖ ಇಷ್ಟಕಾರ್ಯಸಿದ್ಧಿ ರಾಜಕೀಮಿತ್ರರಿಂದ ಕ್ಷೇಮ ಭೂವ್ಯವಸಾಯಾದಿ ಸಂತೋಷ ಗೃಹಕೃತ್ಯಾನುಕೂಲತೆ ಪಾಂಡಿತ್ಯದಿಂದ ಮರ್ಯಾದೆ ಗೃಹಾಭಿವೃದ್ಧಿ ಶುಭಾಧಿಕ ಪುಣ್ಯಕಾರ್ಯದಲ್ಲಿ ಉತ್ಸಾಹ ಲಾಭ ಕಾರ್ಯ.

ಧನು

ತಾ|| 25, 30, 1 ಕೀರ್ತಿ ಲಾಭ ರಾಜಕೀಜನರಿಂದ ಸೌಖ್ಯ ಮಂತ್ರಸಿದ್ಧಿ ವಿನೋದವಾಗಿ ಸಂಚಾರಾಧಿಕೆ ಪುಣ್ಯಕಾರ್ಯ ಅನುಕೂಲತೆ ಮನೋಲ್ಲಾಸ ಗೃಹಾಭಿವೃದ್ಧಿ ಸಂಘಕಾರ್ಯದಲ್ಲಿ ಮರ್ಯಾದೆ ಸತ್ಕಥಾಶ್ರವಣ ಉಳಿಕೆ ದಿವಸಗಳಲ್ಲಿ ಕೆಲವರಲ್ಲಿ ಮನಸ್ತಾಪ ಬಂಧುದ್ವೇಷ ಗೃಹಕೃತ್ಯದಲ್ಲಿ ವಿರೋಧ ದೇವಸ್ಥಾನದಲ್ಲಿ ದೀಪಕ್ಕೆ ಯೆಣ್ಣೆ ತೆಗೆದು ಕೊಡಿ ಲಕ್ಷ್ಮಿಪೂಜೆಗೆ ಹೂವು ತೆಗೆದುಕೊಡಿ ಕ್ಷೇಮ.

ಮಕರ

ಈ ವಾರ ನಿಮಗೆ ಗೃಹಾಭಿವೃದ್ಧಿ ಸೇವಕರಿಂದ ಲಾಭ ಮಂಗಳಕಾರ್ಯ ಭೂವ್ಯವಸಾಯಾಧಿ ಭಾಗ್ಯ ಪುಣ್ಯಕಾರ್ಯ ಮನೋಲ್ಲಾಸಾದಿ ಜಯಪ್ರದ ರಾಜಕೀಜನರಿಂದ ಲಾಭ ವಾಕ್ಚಾತುರ್ಯ ಸಮುದಾಯ ಕಾರ್ಯದಲ್ಲಿ ಗಣ್ಯತೆ ಸ್ವಪರಜನ ಸಹಾಯ ತಾ|| 30. 1 ಸ್ವಲ್ಪ ಅನಾರೋಗ್ಯ ಸಮಾನರೊಡನೆ ಮನಸ್ತಾಪ ವ್ಯಯಾಧಿಕ ಗೋಪೂಜೆಮಾಡಿ ಶುಭಫಲ.

ಕುಂಭ

ತಾ|| 25. 26, 1 ಇಷ್ಟವಸ್ತು ನಷ್ಟ ಶತ್ರುವೃದ್ಧಿ ಕೀರ್ತಿಭಂಗ ಅನಾರೋಗ್ಯ ವ್ಯಯಾಧಿಕ ರಾಜಕೀಜನ ವಿರೋಧ ಸ್ವಜನರಲ್ಲಿ ಅಪವಾದ ಗೃಹಕೃತ್ಯದಲ್ಲಿ ತೊಂದರೆ ಆದಿತ್ಯಹೃದಯ ಪಾರಾಯಣಮಾಡಿ ಬ್ರಹ್ಮಚಾರಿಗೆ ತೊಗರಿಬೇಳೆ ದಾನಕೊಡಿ ಶುಭ. ಉಳಿಕೆ ದಿವಸಗಳಲ್ಲಿ ರಾಜಕೀಜನರಿಂದ ಸುಖಾಧಿಕ ಮನೋಲ್ಲಾಸ ಭೃತ್ಯನರ್ಗಾಭಿವೃದ್ಧಿ ಪೂಜ್ಯರ ಪೂಜೆ ದಾನಧರ್ಮ ಪರೋಪಕಾರ ದೊಡ್ಡವರಲ್ಲಿ ಗಣ್ಯತೆ.

ಮೀನ

ತಾ|| 25, 26, 27 ಸಂಚಾರಾಧಿಕ ಸ್ತ್ರೀ ವಿರೋಧ ಅಧಿಕಾರಿಜನರಲ್ಲಿ ವಿರೋಧ ಪ್ರಯತ್ನವಿಲ್ಲದೆ ವ್ಯಯಾಧಿಕ ಚಂಚಲತೆ ಶತ್ರುವೃದ್ಧಿ ರುದ್ರಾಭಿಷೇಕಕ್ಕೆ ಸಹಾಯಮಾಡಿ ಹುಡುಗರಿಗೆ ಹಾಲು ತೆಗೆದುಕೊಡಿ ಶುಭಫಲ. ಉಳಿಕೆ ದಿವಸಗಳಲ್ಲಿ ಆರೋಗ್ಯಭಾಗ್ಯ ಮಂಗಳಕಾರ್ಯ ಕೀರ್ತಿ ಲಾಭ ಪುಣ್ಯಕಾರ್ಯ ಸಿದ್ಧಿ ರಾಜಕೀ ಮಿತ್ರಾಧಿಕಾರಿಗಳಿಂದ ಸುಖ ಉತ್ಸಾಹ ದೇವತಾಗುರುಸೇವಾ ಫಲ ಸನ್ಮಾನಭಾಗ್ಯ.

ಮುಂದಿನ ವಾರದ ಸತ್ಯವಾದಿ ಪತ್ರಿಕೆಯನ್ನು ಓದಲು ತಪ್ಪಿಸಿ

ಸುಲಭ ಚಿಕಿತ್ಸೆ

ವೃಶ್ಚಿಕ ದಂಷ್ಟ್ರಕ್ಕೆ—ತಿನ್ನುವ ಸೋಡಾ ಪುಡಿಯನ್ನು ಮಿಥಿಲೇಟೆಡ್ ಸ್ಪಿರಿಟ್ಟಿನೊಂದಿಗೆ ಲೇಪಿಸುವದು.

ಡಯಾರಿಯಾ [ನೀರುನೀರಾಗಿ ಬೇಧಿಯಾಗುತ್ತಿದ್ದಲ್ಲಿ]—ಕೋರೆಡ್ಯೆ 10–15 ತೊಟ್ಟು ನೀರಿನೊಂದಿಗೆ ಕಲಿಸಿ ಕುಡಿದಲ್ಲಿ ನಿಲ್ಲುತ್ತೆ.

ಬಾವಿಗೆ— ಬೋರಿಕ್ ಕಂಪ್ರೆಷ್ಡ್ ಉಪಯೋಗವಾಗುವದು.

ಒಹುವಾತ್ಯಕ್ಕೆ—ಒಳ್ಳೇ ತುಭ್ರವಾದ ಕೆಮ್ಮಣ್ಣಿನ ಒಂದು ಉಂಡೆಯನ್ನು (ನಿಂಬೇಹಣ್ಣಿನ ಪ್ರಮಾಣ] ಒಂದು ಲೋಟಾ ನೀರಿನಲ್ಲಿ ಕಲೆತು ಆ ನೀರಿನ ತಿಳಿಯು ಮೇಲುವುದು. ಆ ನೀರನ್ನು ಬೇರೆ ಪಾತ್ರೆಯಲ್ಲಿ ಬಗ್ಗಿಸಿಕೊಂಡು ಒಂದು ಅರಪಾವು ದ್ರಾಕ್ಷಿ ಹಣ್ಣನ್ನು ಶುಭ್ರವಾದ ಒಟ್ಟೆಯಲ್ಲಿ ಸುತ್ತಿ ಹಾಕಿಟ್ಟಿರತಕ್ಕದ್ದು. ಬೆಳಿಗ್ಯೆ ಎಳುತ್ತಲೂ ಮುಖವನ್ನು ತೊಳೆದು ಕೊಂಡಸಂತರ ಆ ಒಟ್ಟೆಯ ಗಂಟನ್ನು ಹಾಗೇ ತೆಗೆದುಕೊಂಡು ಗಂಟುಬಿಚ್ಚಿ ಹಣ್ಣುಗಳನ್ನು ತಿನ್ನುವದು. ಅನುಭವಸಿದ್ಧ ಪ್ರಯೋಗ. ಖಂಡಿತ ಗುಣವಾಗುವುದು. ಹೆಚ್ಚು ದಿನ ಉಪಯೋಗಿಸಿದಲ್ಲಿ ಶೀತವಾಗಿ ಕಷ್ಟವಾಗುವುದು. ಜೋಕೆ.

ಶೋಭೆಗೆ—ಆಡಿನ ಹಾಲನ್ನು ಕುಡಿಯುತ್ತಾ ಒಂದಲ್ಲಿ ಶೋಭೆಯು ಇಳಿಯುವುದು. ಕೈಕೆಂಡ ಪ್ರಯೋಗ. (ಓಂ)

ವಿನೋದಲಹರಿ

ಹೆಂಡತಿ—ನಾನು ವರುಷಕ್ಕೆ ಎರಡೇ ಸಲ ತಪರು ಮನೆಗೆ ಹೋಗಿ ಬರುತ್ತೇನೆ ಆಯ್ತಾ ?

ಗಂಡ—ಒಂದು ಸಲ ಹೋದರೆ ಎಷ್ಟು ದಿನ ಅಲ್ಲಿ ಇರುತ್ತಿ ?

ಹೆಂಡತಿ—ಹೆಚ್ಚಿಗೆ ಇಲ್ಲ, ಆರಾರೇ ತಿಂಗಳು ಅಷ್ಟೆ.

ಂ ಂ

ಒಬ್ಬ—ಈ ಪುಸ್ತಕದಲ್ಲಿರುವುದನ್ನೆಲ್ಲಾ ಕಾಲು ಘಂಟೆಯಲ್ಲೇ ತಿಳಿದುಕೊಳ್ಳಲು ಏನು ಮಾಡಬೇಕು ?

ಇನ್ನೊಬ್ಬ—ಈ ಪುಸ್ತಕವನ್ನೂ, ಸ್ವಲ್ಪ ಉಪ್ಪು ಕಾರವನ್ನೂ ಹಾಕಿ ಚೆನ್ನಾಗಿ ಅರೆದು ಕುಡಿಯಬೇಕು.

ಂ ಂ

ಸಂಸ್ಕೃತ ಉಪಾಧ್ಯಾಯರು ಪಾಠಮಾಡುತ್ತ—"ಪರೋಪಕಾರಾಯ ಮಿದಂ ಶರೀರಂ" ಎಂದು ಹೇಳಿ ಅರ್ಥ ಹೇಳಿದರು.

ಹುಡುಗರ ಗುಂಪಿನಿಂದ—ಹಾಗಾದರೆ ನಿಮಗೆ ಬರುವ ಸಂಬಳವನ್ನೆಲ್ಲಾ ಬಡ ಹುಡುಗರಿಗೆ ಕೊಟ್ಟುಬಿಡಿ.

ಂ ಂ

ಗಂಡ—ಇದೇನೆ ? ಒಟ್ಟಿಯಲ್ಲಿ ತುಂಬಿಟ್ಟಿರೋದು ?

ಹೆಂಡತಿ—ಗಟ್ಟಿಯಾಗಿ ಕೂಗ್ಬ್ಯಾಡ್ರೀ ! ನೆರೆ ಮನೆಯವರ ಹಿತ್ಲು ಕಾಯಿ.

ಂ ಂ

ಪಾಠಕ (ವಾಚಕ)—ರೀಡಿಂಗ್ ರೂಮಿನಲ್ಲಿ ಓದುತ್ತಾ) ಎಲ್ರೀ ನನ್ನ ಪುಸ್ತಕ ?

2 ನೆಯ ವಾಚಕ—ನಿಮ್ಮ ಪುಸ್ತಕ ಎಲ್ಲಿಟ್ಟಿದ್ದೀರಿ ?

ಮೊದಲನೆಯವ—ಅಲ್ರೀ ! ನನ್ನ ಪುಸ್ತಕ ಅಂತ ಬೇರೆ ಇದೆ

ಂ ಂ

ಒಬ್ಬ—ನಿಜವಾದ ವಿಚಾರವನ್ನು ತಿಳಿಯಲು ಯಾವ ಪೇಪರ್ ಓದಬೇಕೋ ?

ಇನ್ನೊಬ್ಬ—"ಸತ್ಯವಾದಿ" ಪೇಪರ್ ಓದಬೇಕು.

ಂ ಂ

ಕಳ್ಳ—ಸಾಧ್ಯಸ್ಥನಂತೆ ನಟಿಸುತ್ತಾ. ಮನೆಯ ಯಜಮಾನನನ್ನು ಕುರಿತು—ಸ್ವಾಮಿ, ಎಲೆಕ್ಟ್ರಿಕ್ ದೀಪವನ್ನಾರಿಸಲು ಏನು ಮಾಡಬೇಕು ?

ಯಜಮಾನ—(ಗುಟ್ಟು ತಿಳಿದು) ಹೊರಗೆ ಹೋಗಿ ಆ ಎರಡು ತಂತಿಯನ್ನು ಕಿತ್ತುಹಾಕು ! ಎಂದರು.

ಇಂಡಿಯಾದೇಶದ ವರ್ತಮಾನ

ಮದರಾಸ ರಾಷ್ಟ್ರದ ಉತ್ತರದಿಕ್ಕಿನಲ್ಲಿರುವ ಚಿಲಕಾಸರೋವರದ ಉದ್ದ 42 ಮೈಲು ಆಗಲ 10 ಮೈಲು. ಆಳ ಎಲ್ಲಿಯೂ 6 ಅಡಿಗಳಿಗೆ ಮಿಾರಿರುವುದಿಲ್ಲ. ಈ ಸರೋವರದ ಒಂದು ಮಹತ್ವವೇನೆಂದರೆ—ಇದರಲ್ಲಿಯ ನೀರು ಡಿಸಂಬರ್ ತಿಂಗಳಿಂದ ಜೂಲೈ ತಿಂಗಳುವರೆಗೂ ಉಪ್ಪಾಗಿರುತ್ತದೆ. ಮಿಕ್ಕ ಕಾಲಿದಲ್ಲಿ ಸಿಹಿಯಾಗಿರುತ್ತದೆ.

ಮುಂಬೈಯಲ್ಲಿ ವಿಕ್ಟೋರಿಯಾ ಟರ್ಮಿನಸ್ ರೈಲ್ವೆ ಸ್ಟೇಷನ್ನಿನ ಕಟ್ಟಡದಷ್ಟು ಅಂದವಾದ ಕಟ್ಟಡವುಳ್ಳ ಸ್ಟೇಷನ್ನು ಪ್ರಪಂಚದಲ್ಲಿ ಬೇರೊಂದು ಇಲ್ಲ. ಅದರ ನಿರ್ಮಾಣವು 1888 ರಲ್ಲಿ ಮುಗಿಯಿತು. ಅದಕ್ಕೆ ಆಗಿರುವ ಖರ್ಚು 60 ಲಕ್ಷ ರೂಪಾಯಿಗಳು.

ಉಸ್ಮಾನಿಸ್ತಾನ್ ಉದ್ಯಮವನ್ನು ಬಲಪಡಿಸುವ ಉದ್ದೇಶದಿಂದ ಹೈದರಾಬಾದಿನ ನಿಜಾಂರವರು ಉತ್ತರ ಸರ್ಕಾರದ ಜಿಲ್ಲೆಗಳನ್ನೂ ದತ್ತಮಂಡಲ ಜಿಲ್ಲೆಗಳನ್ನೂ ಕೂಡ ಬ್ರಿಟೀಷು ಸರ್ಕಾರದಿಂದ 50 ಕೋಟಿ ರೂಪಾಯಿಗಳಿಗೆ ಕೊಳ್ಳುವದೆಂಬ ಸಮಾಚಾರ ಹೊರಟಿರುವದೆಂದು ಇದು ನಿಜವೋ ಸುಳ್ಳೋ ಹೇಳಲಾಗದೆಂದೂ ಆಂಧ್ರಪತ್ರಿಕೆಯು ತಿಳಿಸುತ್ತದೆ. ಇದು ನಿಜವಿರುವದಾದರೆ ಮೈಸೂರು ಸರ್ಕಾರವು ನೀಲಗಿರಿ, ಒಳ್ಳಾರಿ, ಅನಂತಪುರ, ಉತ್ತರ-ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಕೊಳ್ಳಲು ಯತ್ನಿಸಬಹುದು ಆಗ ಕರ್ನಾಟಕ ಏಕೀಕರಣವೂ ಸಫಲವಾಗವುದು.

——

ಅಮೇರಿಕವೂ—ಯುದ್ಧವೂ

——

ರೂಸ್ವೆಲ್ಟರವರು ಹೀಗೆ ಹೇಳಿರುವರು—"ಯುದ್ಧದಂದರೆ ನನಗೆ ಪರಮ ದ್ವೇಷ. ಯುದ್ಧವೆಂಬುದು ನನಗೆ ಬೇಡವಾದದ್ದು ಯುದ್ಧವು ಅಮೇರಿಕಾ ಸರಹದ್ದಿಗೆ ಎಂದೂ ಬಾರದಂತೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುವೆನು." ಯುದ್ಧವೆಂದರೆ ನನಗೆ ಅಸಹ್ಯವಾಗಿ ಹೋಗಿದೆ. ಶಾಶ್ವತವಾಗಿ ಈ ತೀರಕ್ಕೆ ಯುದ್ಧವು ಬಾರದಂತೆ ಮಾಡಬೇಕೆಂದು ದೃಢನಿಶ್ಚಯವನ್ನು ಮಾಡಿಕೊಂಡಿರುವೆನು. ನಾನು ಇತರ ದೇಶಗಳಲ್ಲಿಯ ಯುದ್ಧಗಳಲ್ಲಿ ಭಾಗವಹಿಸುವುದಿಲ್ಲ.

ಟಿಕೆಟ್ ಕಲೆಕ್ಟರ್—ಏನ್ರೀ ! ಟಿಕೇಟಿಲ್ಲದೆ ರೈಲಿನಲ್ಲಿ ಪ್ರಯಾಣಮಾಡುತ್ತೀರಾ ?

ಕಳ್ಳ – (ದರ್ಪದಿಂದ) ನೀವು ತಂದು ಕೊಡದೆ ಇದ್ದರೆ ನಾವೇನು ಮಾಡೋದ್ರೀ ! ಬಗುಳಿ.

ಯಂ. ವೆಂಕಟಾಚಲಭಟ್ಟ.
ಶ್ರೀ ಮುಳುಬಾಗಿಲು ಮಠ.

ಕಾಂಗ್ರೆಸ್ಸಿನ ನಿರ್ಮಾಣ ಕಾರ್ಯಕ್ರಮ

——

ಈಗ 20 ವರುಷಗಳಿಂದ ಶ್ರೀ ಗಾಂಧಿ ಮಹಾತ್ಮರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸು ಈ ಕೆಳಗೆ ಕಂಡ ನಿರ್ಮಾಣ ಕಾರ್ಯಗಳು ಮಾಡುತ್ತಿದೆಯಷ್ಟೆ—

(1) ಖದ್ದರು ಪ್ರಚಾರ (2) ಹಿಂದೂ ಮಹಮ್ಮದೀಯರ ಐಕಮತ್ಯ (3) ಅಸ್ಪೃಶ್ಯತಾ ನಿವಾರಣೆ (4) ಸುರಪಾನ ನಿರ್ಮೂಲತೆ ಇತ್ಯಾದಿ. ಇವುಗಳೊಂದಿಗೆ ಇನ್ನೂ ಕೆಲವು ಸೇರಿಸಲ್ಪಟ್ಟಿವೆ—

(1) ಗ್ರಾಮಪಾರಿಶುದ್ಯತೆ (2) ವಯೋಜನ ವಿದ್ಯೆ (3) ಪಾರಿಶ್ರಾಮಿಕ ವಿದ್ಯೆ (4) ಸ್ತ್ರೀಯರ ಉದ್ಧಾರ (5) ಆರೋಗ್ಯ ಪ್ರಬೋಧನೆ (6) ರಾಷ್ಟ್ರಭಾಷಾಭಿವೃದ್ಧಿ (7) ಸ್ವಭಾಷೋದ್ಧಾರ (8) ಪ್ರತಿವ್ಯಕ್ತಿಗೂ ಅವಶ್ಯಕವಾದ ತಿಂಡಿ, ಬಟ್ಟೆ, ನೆಲೆ ಇವುಗಳು ಇರುವಂತೆ ಮಾಡ ಏಕೆ ಇವುಗಳೆಲ್ಲವೂ ಪ್ರಜೆಗಳ ಸೌಕರ್ಯಕ್ಕೂ ರಾಷ್ಟ್ರೋನ್ನತಿಗೂ ಅತಿ ಸಹಾಯಕಾರಿಗಳೇ ಹೌದು. ಇವುಗಳೊಂದಿಗೆ ಈ ಕೆಳಗಿನವುಗಳನ್ನು ಸೇರಿದಲ್ಲಿ ಒಳ್ಳಿತೆಂದು ಕೆಲವು ಪತ್ರಿಕೆಗಳು ಅಭಿಪ್ರಾಯಪಟ್ಟವೆ—

(1) ಹಿಂದೂಸಂಘಕ್ಕೆ ಪುನರ್ಜೀವವನ್ನು ಕೊಡುವಿಕೆ (2) ದೇವಭಾಷಾಪ್ರಚಾರ (3) ಆಯುರ್ವೇದ ಪ್ರಚಾರ (4) ದೇಶೀಯ ಕಳಾಪೋಷಣೆ (5) ಸೈನಿಕ ಶಿಕ್ಷಣ (6) ಶರಣಾಲಯಗಳ ಮತ್ತು ಅನ್ನಛತ್ರಗಳ ಏರ್ಪಾಟು (7) ವ್ಯವಸಾಯಾಭಿವೃದ್ಧಿ (8) ಗ್ರಂಥಾಲಯಗಳ ನಿರ್ಮಾಣ (9) ಪ್ರಾಚೀನ ಗ್ರಂಥಗಳ ಮುದ್ರಣ ಇತ್ಯಾದಿ

ಗಾದೆಗಳು

ತೃಪ್ತಿ ಎಂದೂ ಸವಿಯದ ಭಂಡಾರ—
ವಿನಯಿ ಮನುಷ್ಯನು ವಿನಯವನ್ನು ಅವಿನಯ ಮನುಷ್ಯನಿಂದ ಕಲಿಯುತ್ತಾನೆ—
ಸಕ್ಕರೆ ಸಕ್ಕರೆ ಎಂದು ಸುಮ್ಮನೆ ಹೇಳಿದರೆ ಬಾಯಿ ಸಿಹಿಯಾಗುವುದಿಲ್ಲ—

ಂ ಂ

ಉಪಾಧ್ಯಾಯರು—ವಿದ್ಯಾರ್ಥಿಯನ್ನು ಕುರಿತು ಈ ಕಿಟಕಿಯ ಗಾಜನ್ನು ಈ ದಿನ ಒಡೆದು ಹಾಕಿರುವೆಯೆಂದು ಗೊತ್ತಾಗಿದೆ. ನಿಜವೋ ಸುಳ್ಳೋ.

ವಿದ್ಯಾರ್ಥಿ—ಅದು ನಿಜವಲ್ಲ ಖಂಡಿತ ಸುಳ್ಳು.

ಉಪಾಧ್ಯಾಯ—ಅದು ಹ್ಯಾಗೆ ಸುಳ್ಳು, ಸತ್ಯ ಮಾಡಿ ಹೇಳುವಿಯಾ ?

ವಿದ್ಯಾರ್ಥಿ—ಈವತ್ತು ಒಡೆಯಲಿಲ್ಲ ಮೊನ್ನೆ ಒಡೆದಿರುವೆನು ಎಂದು ಹೇಳಲು ಸಿದ್ಧನಿರುವೆನು.

ಕೆ. ತಿಮ್ಮಯ್ಯ,
ಉಡುಪಿ ಆನಂದಭವನ, ಮೈಸೂರು.

ಶ್ರೀಮನ್ಮಹಾರಾಜ ಶ್ರೀ ಜಯ ಚಾಮರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ದಿನಾಚರಣೆ

(ತಾ. 8-9-40 ರಲ್ಲಿ ಮೈಸೂರು ತಾಲ್ಲೂಕು ಗೋಪಾಲಪುರದ ಗ್ರಾಮಸ್ಥರು ಶ್ರೀ|| ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಅರ್ಪಿಸಿದ ಶ್ರೇಯಃ ಪ್ರಾರ್ಥನೆ

ರಾಗ–ಕಲ್ಯಾಣಿ–ಆದಿತಾಳ

ಪಾಲಿಸೌ ಕಲ್ಯಾಣಿ ।
ಶೈಲನಿಲಯೆವಾಣಿ ॥ ಪ ॥

ಯದುಕುಲೇಂದು ವಂ-ಸತತ ।
ಸುಗುಣಸಿಂಧುವಂ ॥
ಮುದದಿ ಕೃಷ್ಣರಾಜ ।
ನಿತ್ಯ ಸುಜನಬಂಧುವಂ ॥
ದಯಾಳುವಂ ।
ಸುಭಾನುವಂ ಪ ದುಳದಿಂದಲಿ ॥ ೧ ॥

ಮೆರೆವ ಕನ್ನಡದ ನಾಡಿ ।
ಗರಸನೆನಿಪನಂ ॥
ಪರಮ ರತ್ನ ಪೀಠದಲಿ ।
ಕುಳಿತು ನಳಿವನಂ ॥
ನರೇಂದ್ರನಂ-ಸು ಸಾಂದ್ರನಂ ।
ನಿಸದಭುವಿಯೊಳು ॥ ೨ ॥

ಸೋಮ ಕುಲೋದ್ಭೂತ ಜಯ ।
ಚಾಮರಾಜನಂ ॥
ಪ್ರೇಮದಿಂದೆ ಪ್ರಜೆಗಳೆಲ್ಲ-ರನ್ನ ।
ಪೊರೆವನಂ ॥
ವಿಲಾಸದಿಂ—ಸಂತೋಷದಿಂ ।
ಮಹಾಕಟಾಕ್ಷದಿಂ ॥ ೩ ॥

ಪಂ|| ಕವಿ ಶ್ರೀ ಎಚ್. ಶಿವಲಿಂಗಶಾಸ್ತ್ರಿಗಳು.
ಪರಮಾಪುರ, ಗುಂಡ್ಲುಪೇಟೆ ತಾಲ್ಲೂಕು.

ಕಲ್ಕತ್ತೆಯ ರೋಟರಿ ಕ್ಲಬ್ಬಿನಲ್ಲಿ ಪಂಡಿತ ರೊನೋಶಚಂದ್ರಭಟ್ಟಾಚಾರ್ಯರವರು ನಕ್ಷತ್ರಗಳನ್ನು ಕುರಿತು ಉಪನ್ಯಾಸ ಮಾಡಿದರು. ನಕ್ಷತ್ರಗಳು ಯಾವ ವಿಧದಲ್ಲಿ ಮನುಷ್ಯರ ವರ್ತನೆಯಲ್ಲಿ ಬದಲಾವಣೆಯನ್ನುಂಟುಮಾಡುವವೋ ಆ ವಿಷಯವನ್ನು ವಿಶದವಾಗಿ ತಿಳಿಸಿದರು. ಇವರು ಜ್ಯೋತಿಷ ಶಾಸ್ತ್ರದಲ್ಲಿ ಮಾತ್ರವಲ್ಲದೆ ಸಿದ್ಧಾಂತದಲ್ಲಿಯೂ ಅಸಮಾನ ಪ್ರಜ್ಞೆಯುಳ್ಳವರಾಗಿದ್ದಾರೆ ಗ್ರಹವೀಕ್ಷಣೆಯಿಂದ ಹಾನಿಯುಂಟಾಗುವದಾಗಲಿ ಅದನ್ನು ತಪ್ಪಿಸಿಕೊಳ್ಳುವ ಮಾರ್ಗವನ್ನು ಯಾರೂ ಇದುವರೆಗೂ ತಿಳಿಸಿರುವುದಿಲ್ಲ.

ಯುದ್ಧವಾರ್ತೆ

ಈಚಿಪ್ಪಿನ ನದಿಯಲ್ಲಿ ಇಟಲಿಯನ್ ಸೇನೆಗಳು ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಳ್ಳುತ್ತಲಿವೆ.

ಬ್ರಿಟನ್ನಿನ ಮೇಲೆ ವಿಮಾನ ದಾಳಿಗಳು ನಡೆಯುತ್ತಲೇ ಇವೆ. ಬ್ರಿಟಿಷರು ಶತ್ರುವಿಮಾನವೆನ್ನು ಹೊಡೆದುರುಳಿಸುತ್ತಿದ್ದಾರೆ.

ಬರ್ಲಿನ್ನಿನ ಮೇಲೆ ಆರ್. ಎ. ಎಫ್. ವಿಮಾನ ದಾಳಿ ಜೋರಾಗಿ ನಡೆಯುತ್ತಿದೆ.

ಫ್ರೆಂಚ್ ಮತ್ತು ಜರ್ಮನ್ ಬಂದರುಗಳ ಮೇಲೆ ಬ್ರಿಟಿಷರು ಭಯಂಕರ ದಾಳಿ ಮಾಡುತ್ತಿದ್ದಾರೆ.

ರಾತ್ರೀ ಕಾಲದಲ್ಲಿ ಶತ್ರು ಕಾಲದ ಶತ್ರು ವಿಮಾನಗಳ ದಾಳಿಯಲ್ಲಿ ಅವನ್ನು ಬೆರಗು ಮಾಟುವ ಹೊಸ ಯುಕ್ತಿಯನ್ನು ಬ್ರಿಟಿಷರು ಕಂಡು ಹಿಡಿದಿದ್ದಾರೆ. ಸರ್ಚ್‌ಲೈಟಿನಲ್ಲಿ ಬಿಳಿ ಕಿರಣವಿಲ್ಲದೆ ಕಾರ್ಯಸಾಗಿಸುವದೇ ಈ ಯುಕ್ತಿ. ಶತ್ರುಗಳಿಗೆ ತುಂಬಾ ತೊಂದರೆಯು ರಕ್ಷಣಾ ಕಾರ್ಯಕ್ಕೆ ತುಂಬಾ ಸಹಾಯವು ಆಗಿದೆ.

ಯುದ್ಧ ಸುರುವಾದಂದಿನಿಂದ ಬ್ರಿಟನ್ನಡೋಲೆ ದಾಳಿಮಾಡಿದ ಜರ್ಮನ್ ವಿಮಾನಗಳಲ್ಲಿ ಅರ್ಧಕ್ಕಿಂತ ವಿಮಾನಗಳು ನೆಲಕ್ಕುರುಳಿಸಲ್ಪಟ್ಟಿವೆ ಜೂನ್ 18 ರಿಂದ ಈಚೆಗೆ 2069 ವಿಮಾನಗಳು ಬ್ರಿಟನ್ನಿನ ಮೇಲೆ ದಾಳಿಮಾಡಲು ಬರಲಿದ್ದವು. ಕಳೆದ ಶನಿವಾರಕ್ಕೆ ಮುಗಿಯುವ 5 ವಾರಗಳಲ್ಲಿ 173 ಜರ್ಮನ್ ದಾಳಿಗ ವಿಮಾನಗಳು ನೆಲಕ್ಕುರುಳಿದವು. ಈ ಅವಧಿಯಲ್ಲಿ ಬ್ರಿಟಿಷರ 560 ವಿಮಾನಗಳು ಬಿದ್ದವು. ಅವುಗಳಲ್ಲಿ 533 ವೈಮಾನಿಕರು ಸುರಕ್ಷಿತ ಇರುವರು.

ಬ್ರಿಟಿಷ್ ಆರ್. ಎ. ಎಫ್. ವಿಮಾನಗಳು ಡಾರ್ಟ್‌ಮಂಡೇಮ ಕಾಲುವೆಯ ಮೇಲೆ ಹಲ್ಲೆ ಮಾಡಿ ಬಾಂಬಿನಮಳೆಗರೆದು ಬಂದನೆಂದು ವಿಮಾನ ಖಾತೆಯವರು ತಿಳಿಸುತ್ತಾರೆ ಇದರಿಂದ ಅವರಿಗೆ ಹಾನಿಯಾಗಿದೆ.

ಫೇಮಸ್ ಕಾಂಪಿಟೇರ್ಷ ನಂ. ೬ ರ ಸೀಲು ಮಾಡಿಟ್ಟಿದ್ದ ಉತ್ತರ

ಎಡದಿಂದ ಬಲಕ್ಕೆ—1 ಗಜಾನನ. 7 ಹಣ. 12 ಕುಂಜರ. 14 ತಿರಕ. 15 ನಗ.

ಮೇಲಿನಿಂದ ಕೆಳಕ್ಕೆ—1 ಗಣನೆ. 2 ಜಾಣ. 3 ನಗೆ. 4 ನವೀನ. 5 ಕತ್ತೆ. 6 ಕಾರ್ಯ. 8 ಉರಗ. 9 ನೀತಿ. 10 ದಾರ. 11 ಲೋಕ. 13 ಜನ.

[ಈ ಉತ್ತರವು ಕಳೆದ ವಾರ ತಡವಾಗಿ ತಲಪಿದ್ದರಿಂದ ಆ ವಾರವೇ ಪ್ರಕಟಿಸಲಿಲ್ಲ. ಈ ವಾರ ಪ್ರಕಟಿಸಲಾಗಿದೆ.—ಎಡಿಟರ್.]

* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *

ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ, ಇಡೀ ಕರ್ನಾಟಕದ ಹೊರ–ಒಳ ಭಾಗಗಳಲ್ಲಿ ಎಲ್ಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ

ನವಸಂದೇಶ

ಇಂದೇ ಚಂದಾದಾರರಾಗಿರಿ.

ಆಂಜೇವೆಚ್ಚ ಸೇರಿ ರೂ. ೩–೮–೦

ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ

ನವಸಂದೇಶ ಕಾರ್ಯಾಲಯ. ಬಳ್ಳಾರಿ

ಸಾಂಗಲಿ ಸಂಸ್ಥಾನದ ಹರಿಪುರ ಎಂಬ ಗ್ರಾಮದಲ್ಲಿ ಶಂಕರ ದೇವಾಲಯದ ಅಂಗಣದಲ್ಲಿ ನಿಂತು ದೇವದರ್ಶನ ತೆಗೆದುಕೊಳ್ಳಲಿಕ್ಕೆ ಪೂಜಾರಿಗಳು ಅಡ್ಡಿಮಾಡಿರುವರೆಂದು ಅಲ್ಲಿಯ ಹರಿಜನರು ಬುಧಗಾಂವ ಸಂಸ್ಥಾನದ ಅಧಿಪತಿಗಳ ಕಡೆಗೆ ಅರ್ಜಿಮಾಡಿಕೊಂಡಿರುತ್ತಾರೆ.

ಓಲಂಪಿಯನ್ ಕ್ರೀಡೆ ಬರುತ್ತಿ

ನಿಮ್ಮ ಚರ್ಮವೇ ನಿಮ್ಮ ಆರೋಗ್ಯಭಾಗ್ಯವು

ನಾವು ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಿಲೀ ಡಾಕ್ಟರಿಂದ ಪರೀಕ್ಷೆ ಮಾಡಿಸಬೇಕಾದ ಪ್ರಮೇಯವು ಒದಗಿದಾಗ "ಈತನು ಚಿಕಿತ್ಸಾಶಾಸ್ತ್ರ ಪ್ರವೀಣನೋ?" ಎಂಬ ವಿಷಯವನ್ನು ಪ್ರಥಮತಃ ಯೋಚಿಸುವೆವು. ಆ ಡಾಕ್ಟರನ ಮೋಸ ಭರವಸೆ ಇಡಬಹುದೇ ಎಂಬುವುದನ್ನು ಕೂಡ ಅರಿಯು ಜಾಗರೂಕರಾಗುತ್ತೇವೆ.

ನಿಜವಾಗಿ, ಸರಿಯಾದ ಶಾಸ್ತ್ರಜ್ಞಾನವಿಲ್ಲದ ಅಥವಾ ಅನುಭವವಿಲ್ಲದ ಡಾಕ್ಟರುಗಳ ವಶಕ್ಕೆ ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಲೀ ಚಿಕಿತ್ಸೆಗಾಗಿ ಒಪ್ಪಿಸತಕ್ಕುದಲ್ಲ.

ಇನ್ನು ನಿಮ್ಮ ಚರ್ಮದ ವಿಷಯವೋ?

ನೀವು ದೇಹನೈರ್ಮಲ್ಯಕ್ಕಾಗಿ ಉಪಯೋಗಿಸುವ ಸಾಬೂನಿನ ವಿಷಯವೇನು? ಅದು ಬೆರಿಕೆಯಿಲ್ಲದ ಕಚ್ಚಾ ಪದಾರ್ಥಗಳಿಂದ ಆರೋಗ್ಯ ವಿಧಾನದಿಂದ ತಯಾರಿಸಲ್ಪಟ್ಟಿದೆಯೇ? ಎಂಬ ವಿಷಯವನ್ನು ಗಮನದಲ್ಲಿಟ್ಟಿರುವಿರಾ? ಅಥವಾ ಬೇರೊಬ್ಬರು ಉಪಯೋಗಿಸುತ್ತಿರುವರೆಂದು ಯಾವದೋ ಒಂದು ತರಹದ ಸಾಬೂನನ್ನು ಉಪಯೋಗಿಸುತ್ತಿರುವಿರಾ? ಅಥವಾ ಜಾಹಿರಾತುಗಳ ಮನಮೋಹಕರವಾದ ಮಾತುಗಳಿಗೆ ಮರುಳಾಗಿ ಹೋಗಿರುವಿರಾ?

ನಿಮ್ಮ ಚರ್ಮದ ರಕ್ಷಣೆಯು ನೀವು ಉಪಯೋಗಿಸುವ ಸಾಬೂನನ್ನು ಅವಲಂಬಿಸುತ್ತದೆ. ದೇಹಾರೋಗ್ಯವಾದರೋ ಚರ್ಮದ ನೈರ್ಮಲ್ಯವನ್ನವಲಂಬಿಸಿರುತ್ತದೆ. ವ್ಯಾಧಿಗಳನ್ನು ಬಗೆಬಗೆಯ ತೈಲಗಳ ಮೂಲಕ ಗುಣಪಡಿಸುವ ಪದ್ಧತಿಯು "ಅಷ್ಟಾಂಗಹೃದಯ" ವೆಂಬ ಪ್ರಾಚೀನ ವೈದ್ಯಗ್ರಂಥದಲ್ಲಿ ತಿಳಿಸಿರುತ್ತದೆ ತೈಲ ಮತ್ತು ಪನ್ನಾರಿ ಸಾಮಾನುಗಳ ಮುಖೇನ ಕ್ರಿಮಿಗಳಕೋಟೆಯನ್ನು ಎದುರಿಸಲಾಗುತ್ತಿತ್ತು.

ಮೈಸೂರು ಗಂಧದ ಸಾಬೂನಿನ ವಿಷಯದಲ್ಲಿ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ. ಇದರ ತಯಾರಿಯಲ್ಲಿ ಉಪಯೋಗಿಸುವ ಪ್ರತಿ ಪದಾರ್ಥವೂ ಚೆನ್ನಾಗಿ ಪರಿಶೋಧಿಸಲ್ಪಡುತ್ತೆ.

ಈ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಪದಾರ್ಥಗಳಲ್ಲಿ ಯಾವ ಬಗೆಯ ಕಲ್ತಿ ಪದಾರ್ಥವಾಗಲೀ ಹಾನಿಕರವಾದ ಪದಾರ್ಥವಾಗಲೀ ಸೇರಿರುವದಿಲ್ಲವೆಂಬ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿನ ವಿಷಯದಲ್ಲಿಯೂ ಅನ್ವಯಿಸುತ್ತದೆ.

ಈ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿಗೆ ಮಾತ್ರವೇ ಅಲ್ಲ. ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಒಗೆಯ ಸಾಬೂನುಗಳಿಗೂ ಈ ಭರವಸೆಯು ಅನ್ವಯಿಸುತ್ತದೆ.— ಮೈಸೂರು ಜಾಸ್ಮಿಕ್ ಸೋಪು, ಮೈಸೂರು ಗುಲಾಬ್ ಸೋಪು ಮೈಸೂರು ಲೆವೆಂಡರ್ ಸೋಪು, ಮೈಸೂರು ಜಾತ್ ಟ್ಯಾಬ್ಲೆಟ್, ಮೈಸೂರು ಪೊಂಗಂ ಬೇವು ಸೋಪು, ಮೈಸೂರು ಟರ್ಕಿಷ್ ಬಾತ್ ಸೋಪು, ಮೈಸೂರು ವಾಷಿಂಗ್ ಸೋಪು, ಮೈಸೂರು ಫೇರಿ ಪ್ಲೇಕ್ಸ್, ಮೈಸೂರು ಕಾರ್ಬಾಲಿಕ್ ಸೋಪು, ಮೈಸೂರು ಲಿಕ್ವಿಡ್ ಸೋಪು ಟೆಕ್ಟೈಲ್ ಸೋಪು, ಇಂಕ್ ಪೆಕ್ಟಿಸೈಡಲ್ ಸೋಪು ಸಾಫ್ಟ್ ಸೋಪು. ಈ ಎಲ್ಲಾ ಸೋಪುಗಳೂ ಪರಿಶುದ್ಧ ಹಾಗೂ ಶ್ರೇಷ್ಠವಾದುವು.

ಇಷ್ಟು ಮಾತ್ರವೇ ಅಲ್ಲ. ಆಧುನಿಕ ಮಹನೀಯರಿಗೂ ಮಹಿಳೆಯರಿಗೂ ಅನುದಿನವೂ ಅವಶ್ಯಕಗಳಾಗಿರುವ ಈ ಕೆಳಗೆ ವಿವರಿಸಿರುವ ಪದಾರ್ಥಗಳ ವಿಷಯದಲ್ಲಿಯೂ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ.— ಮೈಸೂರು ಪೆರಲೈಟ್ ವ್ಯಾನಿಷಿಂಗ್ ಕ್ರೀಂ ಮೈಸೂರು ಬಿಲಾಸಿನಿ ಬ್ರಿಲಿಯಂಟೈನ್, ಮೈಸೂರು ಫೇರಿ ಪೋಮೇಡ್, ಮೈಸೂರು ಕ್ಯಾಲಟಿ ಷೇವಿಂಗ್ ಸ್ಟಿಕ್, ಮೈಸೂರು ಡೆಂಟಲ್ ಕ್ರೀಂ ಮೈಸೂರು ಬ್ಲೂಡೆಂಟ್, ಮೈಸೂರು ಬೂಟ್ ಪಾಲಿಷ್ (ಬ್ರೌನ್, ಬ್ಲ್ಯಾಕ್, ಡಾರ್ಕ್‌ಟ್ಯಾನ್) ಮೈಸೂರು ಕ್ವಿಕ್ ಫಿಕ್ಸ್, ಐಡೋಕೂರ್.

When you desire to buy or sell

Houses & Sites

Govt. Loan Bonds

Shares of Companies

apply to

The Satyavadi Ltd., Mysore.

ಮನೆ ಮತ್ತು ಸೈಟುಗಳನ್ನೂ ಸರ್ಕಾರಿ ಸಾಲದಪತ್ರ ಮತ್ತು ಕಂಪೆನಿ ಷೇರುಗಳನ್ನೂ

ಕೊಂಡುಕೊಳ್ಳುತ್ತೇವೆ ಮತ್ತು ಮಾರುತ್ತೇವೆ,

ಬೇಕಾದವರು ತಿಳಿಸಬಹುದು.

ಲೇಖಕರಿಗೆ ಸೂಚನೆ

ಚೆನ್ನಾಗಿರುವ ಕಥೆ, ನಾಟಕ, ತಾತ್ತ್ವಿಕ ಲಿಕ ಮತ್ತು ದೇಶಹಿತದಾಯಕವಾದ ಲೇಖನಗಳು, ವಿನೋದ ವಿಚಾರ, ಮುಂತಾದವುಗಳನ್ನು ಕಳುಹಿಸಿದರೆ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

VAIDYARATNAM

P. S. Varier's

Arya Vaidya Sala

Kottakkal

Branches – Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidyaratnam vsits his Calicut branch on almost every 1st and 3rd Sundays and Palghat Branch on 2nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthfulness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala'

KOTTAKAL (S.Malabar)

The Satyavadi Limited

(Incorporated in Mysore State)

MYSORE

A few shares of Rs. 5 are available

ಪ್ರಿಂಟಿಂಗ್ ವಿಚಾರದಲ್ಲಿ

ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.

ಸತ್ಯವಾದಿ ಲಿಮಿಟೆಡ್,

ಚಾಮರಾಜಪುರಂ, ಮೈಸೂರು

Founded 1917

SATYAVADI

ಆನಂದವಿಹಾರ 12 ಬಹುಮಾನ ರೂ. 30

ಪ್ರವೇಶಫಸ 1 ಉತ್ತರಕ್ಕೆ 2 ಆಣೆ, 3 ಉತ್ತರಕ್ಕೆ 4 ಆಣೆ ಉತ್ತರ ತಲಪಿಸಲು ಕಡೇ ತಾ, 13-10-40

ಮೊದಲನೇ ಬಹುಮಾನ ರೂ ೧೫ **ಇತರ ಬಹುಮಾನ ರೂ. ೧೫**

ಸರಿಯಾದ ಉತ್ತರವು ತಾ|| 16-1 -40 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವದು.

ನಿಯಮಗಳು—ಮೊಹರು ಮಾಡಿ ಇಟ್ಟಿರುವ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಮೊದಲನೆ ಬಹುಮಾನವೂ. 1-2 ನೇ ತಪ್ಪಿನದಕ್ಕೆ ಇತರ ಬಹುಮಾವ ಕೊಡಲಾಗುತ್ತೆ. ಸರಿಯಾದ ಉತ್ತರಗಳು ಹೆಚ್ಚಾಗಿ ಬಂದಲ್ಲಿ ಅವಕ್ಕೆ ಹಂಚಲಾಗುವುದು. ಪ್ರವೇಶಧನವನ್ನು ಮನಿಯಾರ್ಡರ್ ಅಥವಾಸ್ಟಾಂಪು ಕಳಹಿಸಬಹುದು ಮಾ ನೇಜರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಉತ್ತರಗಳನ್ನು ಬಿಳಿಯ ಕಾಗದದ ಮೇಲೆ ಚಿತ್ತಿಲ್ಲದಂತೆ ಬರೆದು ಕಳುಹಿಸಬಹುದು.

ಕೆಳಗೆ ಕೊಟ್ಟಿರುವ 5 ಪದಗಳಲ್ಲಿ ಬಿಟ್ಟಿರುವ ಅಕ್ಷರವನ್ನು ಸೂಚನೆಯ ನ್ನನುಸರಿಸಿ ಸೇರಿಸಬೇಕು

1 — — ಕು ಮಕ್ಕಳ ಇಂತಹ ಬಟ್ಟಿಗಳು ತಂದೆತಾಯಿಗಳಿಗೆ ಸಂಕಟವನ್ನುಂಟುಮಾಡುತ್ತವೆ

2 — ಟ ಕೆಲವು ಹುಡುಗರಿಗೆ ಇದರ ಮೇಲೇ ಮಮತೆ ಹೆಚ್ಚು.

3 — — ರ್ ಪ್ರಸಿದ್ಧ ಮೊಗಲ್ ಚಕ್ರವರ್ತಿ.

4 — — ಯ ಇದಿದ್ದರೆ ಎಷ್ಟೋ ಸಂದರ್ಭಗಳಲ್ಲಿ ವಿಜಯಿಯಾಗಬಹುದು.

5 — — ಜು ಮಕ್ಕಳು ತಮ್ಮ ಹಠ ಸಾಧಿಸಲು ಹೀಗೆ ಮಾಡುತ್ತವೆ.

ಕೂಪನ್ ನಂ. ಹೆಸರು ಮತ್ತು ವಿಳಾಸ

ವಿ. ಸೂ—ಮೈಸೂರಿನಲ್ಲಿ ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ನಮಗಾಗಲೀಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ರೇಡಿಯಂಟ್ ನ್ಯೂಸ್ ಏಜೆನ್ಸಿಗಾಗಲೀ ಪಾವತಿಮಾಡಬಹುದು.

ಮ್ಯಾನೇಜರ್, **ಆನಂದವಿಹಾರ** C/o ಸತ್ಯವಾದಿ ಆಫೀಸ್, ಚಾಮರಾಜಪುರಂ. ಮೈಸೂರು.

ನ್ಯೂ ಕೃಷ್ಣ ಟಾಕೀಸು

ಹಾಕಿಂ-ತಾಯ್-ಕಿ-ಭೇಟಿ

ಶ್ರೀಮನ್ಮಹಾರಾಜ ಶ್ರೀ ಜಯ ಚಾಮರಾಜ ಒಡೆಯರವರು

ಶ್ರೀಕರ ಶುಭಕರ ಯಾದವ ಧೀರ।
ಮಂಗಳ ಸುಖಕರ ಗುಣಗಂಭೀರ ॥
ಜಯ ಜಯ ಜಯ ಶ್ರೀ ಜೈ ಜೈ ।
ಯಾದವ ಯದುಮಣಿ ಜೈ ಜೈ ॥
ಯಮ್ಮಯ ಪರಿವೃಢ ರಾಜ ಗಂಭೀರ ।
ಸಾರುವೆ ಜಗದೊಳು ನಿನ್ನ ಉದಾರ ॥
ಚಾಮುಂಡಿ ದೇವಿಯ ವರಭಕ್ತನಾಗಿ ।
ಚಾಮರಾಜ ಒಡೆಯರ ಪೌತ್ರನಾಗಿ ॥
ಮಹಿಸೂರ ಪ್ರಜೆಗಳ ಇಂದಿನೊಡಯ ।
ನಸುನಗೆಯಂ ಬೀರ್ವ ಕರುಣಾ ಹೃದಯ ॥
ರಾರಾಜಿಸುವೆ ಮಹಿಸೂರ ನಾಡಿನಲಿ ।
ಲೋಕದ ಒಲುಮೆಯ ಪಡೆಯುತಲಿ ॥
ಜೇಂಕರಿಸುವ ಚತುರಂಗ ಸೇನೆಯ ಮಧ್ಯದಲಿ ।
ರತ್ನ ಸಿಂಹಾಸನವನೇರಿದೆ ಬಹುಮುದದಲಿ ॥
ದ್ವಯರೂಪದಿಂದಿರುವ ಮೃದುಮನವು ।
ಪ್ರಕಾಶಿಸುತ್ತಿರುವ ಜ್ಯೋತಿಯ ಗೆಲವು ॥
ಒಲವು ಪ್ರೀತಿಯಿಂದೊಡಗೊಡ್ಡ ಮುಖದೊಳ್ ।
ಬಾಳ್ಗೆ ವರ ಧರ್ಮಪ್ರಸ್ಥಾನ ಪಥದೊಳ್ ॥
ಜಿಲ್ಲೆಯಂ ಆಳಿದ ನ್ಯಾಯಪರಾಯಣ ।
ಜಹಂಗೀರನಂತೆ ಆಳ್ದಿ ಮೈಸೂರಾಣ ॥
ಯದೂತ್ತಮ ರಘುಕುಲ ಸೋಮ ।
ಸಾರುವೆ ಜಗದೊಳ್ ಆಭಿರಾಮ ॥
ರೀತಿಯಲಿ ಎಲ್ಲ ರಾಜರ ಮನಂ ಗೆಲ್ದು ।
ಪದುಳಂ ಪೊಂದಲಿ ರಾಜ್ಯಲಕ್ಷ್ಮಿಯಂ ಒಲ್ದು
ಗೇಯದ ತವರ್ಮನೆಯಾದ ಮೈಸೂರಿನೋಳ್ ।
ಜಂಗಮ ಬೊವ್ಮ ವಿದ್ಯಾರ್ಥಿಯ ತೆರದೊಳ್
ಶುಕ್ಲಪಕ್ಷದ ಚಂದ್ರನಂತೆ ಬೆಳಗಲಿ ।
ಯದುಕುಲ ವಂಶವು ಸುಖಶಾಂತಿಯಿಂದಲಿ ॥
ಭಂಗಾರ ವೈಡೂರ್ಯಗಳು ತುಂಬಿತುಳುಕಲಿ ।
ಮೈಸೂರು ಬೆಳಗಲಿ ನವಪ್ರಭುಗಳಿಂದಲಿ ॥

ಶ್ರೀ॥ ಜಯರಾವ್,
ಮೈಸೂರು,

Edited, Printed & published by M .S. Krishna Rao, at the Satyavadi Press, Chamaraja Agrahar Mysore